ಮೋಹನನ ಮೈಯ ಮೇಲೆ ಹೊಡೆತಗಳಾಗಿ ಕಣ್ಣೀರು ಹರಿಸಿದವು. 'ಕಕ್ಕಪ್ಪ ಇದ್ದಿದ್ರೆ ಕಾಪಾಡ್ತಿದ್ದ' ಎಂದು ಎಷ್ಟೋ ಸಾರಿ ಕಣ್ಣೀರು ಹರಿಸಿದ್ದ ಮೋಹನ.

ಅಮ್ಮನ ಟ್ರಂಕಿನಲ್ಲಿದ್ದ ದುಡ್ಡನ್ನು ತೆಗೆದುಕೊಂಡು ಮೋಹನ ಒಂದು ದಿನ ಊರು ಬಿಟ್ಟ. ಎಷ್ಟೇಷ್ಟೋ ಊರುಗಳು ಆದಮೇಲೆ ಈ ಊರು ತಲುಪಿ ಈಗಿರುವ 'ಸಂತೋಷ ನಿಲಯ'ವನ್ನು ಸೇರಿಕೊಂಡಿದ್ದ. ಕಾಲ ಉರುಳಿ ಮೋಹನನೆಂಬ ಹುಡುಗ 'ರಾಧಾ' ಎಂಬ ಮಂಗಳಮುಖಿಯಾಗಿ ಬದಲಾದರೂ ಸಿನಿಮಾ ಹುಚ್ಚು ಕಡಿಮೆಯಾಗಿಯೇ ಇಲ್ಲ. ಈಗಲೂ ರವಿಚಂದ್ರನನ್ನು ನೋಡಿದಾಗ ಕಕ್ಕಪ್ಪ, ಕಕ್ಕಪ್ಪನನ್ನು ನೆನೆದಾಗ ರವಿಚಂದ್ರನ್‌ನ ಮುಖ ಮನಸ್ಸಿಗೆ ಬರುವುದು ನಿಂತಿಲ್ಲ.

## 4

ಮತ್ತೆ ಸಿಗ್ನಲ್ ಬಿಟ್ಟಿತು. ರಾಧಾ ಮತ್ತು ಸುಕನ್ಯಾ ಮತ್ತೆ ಮಾತಿಗೆ ಸಿಕ್ಕರು. 'ಲೇ ಅಲ್ಲಲೇ, ಆ ಸಿನ್ಮಾ ನೋಡಿದ್ದುಕ್ಕೇ ಎಲ್ಲಾರೂ ರೊಕ್ಕಾ ಕೊಡಾಕತ್ತಾರಾ?' ಎಂದು ಸುಕನ್ಯಾ ಅಂದಾಗ 'ಯಾವಳಿಗೊತ್ತು? ನೋಡಿಬರ್ೋದು...' ಎನ್ನುತ್ತಾ ರಾಧಾ ಕೈಯಲ್ಲಿದ್ದ ನೋಟನ್ನು ಜಾಕೀಟಿನೊಳಕ್ಕೆ ತುರುಕಿಕೊಂಡಳು. 'ಸಿನ್ಮಾ ಸಿನ್ಮಾ ಅಂತಿಯಲ್ಲ ಅದುನ್ನ ನೋಡಿದ್ರೆ ಏನ್ ಬರ್ತತೋ? ಎಲ್ಲಾ ಸುಳ್ಳ್ ಸುಳ್ಳು ಕೆಲ್ಸಗುಳು ಅವು. ನೋಡಿಯಾ ಇಲ್ಲಾ ಅವತ್ತು ಇಲ್ಲಿಗೇ ಬಂದಿದ್ರು. ಹೆಂಗ್ ಹಗ್ಗಾ ಹಾಕಿ ಹೀರೋನ ಎಗರಿಸ್ತಾ ಇದ್ರು. ಆತ ಇನ್ನಾ ಮುಟ್ಟಂಗಿಲ್ಲ ಅವಾಗ್ಲೇ ರೌಡಿಗುಳು 'ಆ... ಊ' ಅನ್ಕಂತ ಎಗ್ರಿ ಎಗ್ರಿ ಹಿಂದುಕ್ಕ ಬೀಳಾಕತ್ತಿದ್ರು. ರಟ್ಟೆನ್ನು ಇಟ್ಟಂಗೆಳ್ಳಿಗುಳು ಮ್ಯಾಲೆ ಬೀಳಾದೇನು, ಪೌಡ್ರು ಹಾಕಿ ದೂಳು ಹೊಗೀ ಬರ್ಸಾದೇನು. ಸುಮ್ ಸುಮ್ನೆ ಅರ್ಸಾದೇನು, ಒದ್ದಾಡಾದೇನು'' ಎಂದು ಸುಕನ್ಯಾ ವ್ಯಂಗ್ಯವಾಡಿದಾಗ, 'ಸಿನಿಮಾದಾಗ ಎಲ್ಲವುನ್ನ ನಿಜ ನಿಜ ಮಾಡಿಬುಟಿದ್ರೆ ಫಸ್ಟ್ ಪಿಚ್ಚರ್ರಿನಾಗೇ ರಾಜ್‌ಕುಮಾರುಂದು ಕಣ್ಹೋಗಿ ಬಿಟ್ಟಿರಾದು ತಿಳ್ಕ' ಎಂದು, ಮೇಲೊಮ್ಮೆ ಕೆಳಗೊಮ್ಮೆ ಆ ಕಡೆ ಈ ಕಡೆ ನೋಡಿ ಗಂಭೀರವಾಗಿ ದೀರ್ಘ ಉಸಿರೆಳೆದುಕೊಂಡ ರಾಧಾ ಭಲೇ ಬಿಲ್ಡಪ್ಪಿನಲ್ಲಿ ಸುಕನ್ಯಾಳತ್ತ ಬೆರಳು ಮಾಡಿ, 'ನನ್ ಮಗಂದ್, ಸಿನ್ಮಾನ ಸಿನಿಮಾದಂಗ ನೋಡಾದುನ್ನ ಕಲೀಬೇಕು. ಅರ್ಥ ಆಯ್ತಾ?' ಎಂದು ಥೇಟ್ ಹುಚ್ಚಾ ವೆಂಕಟನ ಥರಾ ಡೈಲಾಗ್ ಹೊಡೆದು ತಲೆ ಕೊಡವಿದಳು. ಇದಕ್ಕೆ ತನ್ನದೇ ಸೊಗಸಿನಲ್ಲಿ ಚಪ್ಪಾಳೆ ತಟ್ಟಿ ವಿಶಲ್ ಹೊಡೆದ ಸುಕನ್ಯಾ, 'ನಿಮ್ಮಜ್ಜಿ...' ಎನ್ನುತ್ತಾ ಒದೆಯಲು ಮುಂದೆ ನುಗ್ಗಿದಾಗ ಹೊಡೆತ ತಪ್ಪಿಸಿಕೊಳ್ಳಲು ಓಡಿದ ರಾಧಾ, 'ಅಯ್ಯಾ ಬಿತ್ತು ಬಿತ್ತು' ಎಂದು ಕೂಗಿ ಸಿಗ್ನಲ್ಲು ತೋರಿಸಿದಳು. ಬಿದ್ದ ತನ್ನ ಸಿಗ್ನಲ್ಲಿನ ಕಡೆ ಸುಕನ್ಯಾ ಬಡ ಬಡ ಓಡಿದಳು.

ಕೆಂಪು ಮತ್ತು ಹಸಿರು ಹೂವುಗಳ ಹಳದಿ ಚೂಡಿದಾರದಲ್ಲಿ ಓಡುತ್ತಿದ್ದ ಸುಕನ್ಯಾಳನ್ನೇ ನೋಡುತ್ತಾ ನಿಂತ ರಾಧಾಳಿಗೆ ಕಿರಣ್ ನೆನಪಾದ. ಸುಕನ್ಯಾ, ಸುಕನ್ಯಾ ಆಗುವುದಕ್ಕಿಂತ ಮುಂಚೆ 'ಕಿರಣ್' ಆಗಿದ್ದ. ನಾಲ್ಕು ವರ್ಷದ ಹಿಂದೆ ತಮ್ಮ ಜಾಗಕ್ಕೆ ಬಂದಾಗ ಪಿಯೂಸಿ ಫೇಲಾಗಿ ಓಡಿ ಬಂದ ಹುಡುಗ ಅವನು. ಊರ ಹೊರಗೆ ಹೈವೇ ಪಕ್ಕದ ರೋಡು ದಾಟಿದರೆ ಮರಳು ಲಾರಿಗಳನ್ನು ನಿಲ್ಲಿಸುವ ಬಯಲು ಜಾಗವಿದೆ. ಅದರ ಮೂಲೆಯಲ್ಲಿ ಬ್ರಿಟಿಷರ ಕಾಲದ ವಿನ್ಯಾಸದಲ್ಲಿ ಸೈಜುಗಲ್ಲುಗಳಿಂದ ಕಟ್ಟಿದ ಎರಡು ಅಂತಸ್ತಿನ ಹಳೇ ಸುಣ್ಣದ ಮನೆ. ಮನೆಯ ಹೆಸರು, 'ಸಂತೋಷ ನಿಲಯ'. ಸುಮಾರು ಉದ್ದ ಮತ್ತು ಎತ್ತರವಾಗಿದ್ದ ಕಾಂಪೌಂಡಿಗೆ ಎಂತಹವರನ್ನೂ ಬಗ್ಗಿಸಿ ಕಳಿಸುವ ಸಣ್ಣ ತಗಡಿನ ಬಾಗಿಲಿದೆ. ಸುತ್ತಲೂ ಬೇವಿನ ಮರಗಳು. ಹೊರಗಿನವರಿಗೆ ಆಗಾಗ ಟೀವಿ ಸದ್ದು ಇಲ್ಲಾ ಶುಕ್ರವಾರದ ಸಂಜೆ ಭಜನೆಗಳು ಕೇಳಿಸುತ್ತವಷ್ಟೇ.